**ಸಿ. ಸಿ. ನಂ. 1096/2019**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 20-09-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಆರೋಪಿ ಪರ ಶ್ರೀ ಎಂ.ಕೆ., ವಕೀಲರಿಂದ</u>**

ನಾನು ಆರೋಪಿತರ ವಿರುದ್ಧ ನ್ಯಾಯಾಲಯದಲ್ಲಿ ದೂರು ಸಲ್ಲಿಸುವುದಕ್ಕೂ ಮೊದಲು ಪೋಲಿಸ ಠಾಣೆಯಲ್ಲಿ ದೂರು ನೀಡಿದ್ದೆ. ಆ ರೀತಿ ಹೊಸಪೇಟೆ ಪಟ್ಟಣ ಪೋಲಿಸ ಠಾಣೆಯಲ್ಲಿ ದೂರು ನೀಡಿದ್ದೆ, ಯಾವ ತಾರೀಖಿನಂದು ದೂರು ನೀಡಿದ್ದೆ ಮತ್ತು ಏನು ದೂರು ನೀಡಿದ್ದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹಣದ ವಿಚಾರವಾಗಿ ವಂಚನೆ ಆಗಿದೆ ಎಂದು **2019** ರಲ್ಲಿ ದೂರು ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ದೂರಿನ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪೋಲಿಸರು ನನ್ನ ದೂರಿನ ಆಧಾರದ ಮೇಲೆ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಪೋಲಿಸರು ನಾನು ನೀಡಿದ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತಾರೆ. ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿಲ್ಲ ಮತ್ತು ಅಂತಹ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಾಗಿಲ್ಲ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದ ಕಾರಣವೇ ಆ ರೀತಿ ಯಾವುದೇ ದೂರು ದಾಖಲಾಗಿಲ್ಲ ಮತ್ತು ಪ್ರಥಮ ವರ್ತಮಾನ ವರದಿ ದಾಖಲಾಗಿಲ್ಲ ಅಂದರೆ ಸರಿಯಲ್ಲ.

ನನ್ನ ದೂರನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದೂರನ್ನು ದಾಖಲು ಮಾಡಲು ನಾನು ಭೀಮಸೇನ ಎಂಬುವವರಿಗೆ ಮಾಹಿತಿ ನೀಡಿದ್ದೆ. ನಾನು ಸದರಿಯವರಿಗೆ ಯಾವುದೇ ಮಾಹಿತಿ ನೀಡಿಲ್ಲ ಅಂದರೆ ಸರಿಯಲ್ಲ.

ಭೀಮಸೇನ ರಾವ್ ಈ ಮೊದಲು ವಕೀಲರ ಸಂಘದಲ್ಲಿ ಟೈಪಿಂಗ್ ಕೆಲಸ ಮಾಡುತ್ತಿದ್ದ ಅಂದರೆ ಸರಿ. ವಕೀಲರ ಸಂಘದ ಕಟ್ಟಡದಿಂದ ಸದರಿ ವ್ಯಕ್ತಿಯನ್ನು ಹೊರಗೆ ಹಾಕಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿ ಯಾವಾಗಲೂ ಸರ್ಕಾರಿ ಅಧಿಕಾರಿಗಳ ವಿರುದ್ಧ ಆರ್ ಟಿ ಐ ಅರ್ಜಿ ಸಲ್ಲಿಸುವುದು ಮತ್ತು ಪ್ರಕರಣಗಳನ್ನು ದಾಖಲಿಸುವುದು ಮಾಡುತ್ತಿದ್ದ ಅಂದರೆ ನನಗೆ ಗೊತ್ತಿಲ್ಲ. ಆತ ತನಗೆ ಆಗದ ವ್ಯಕ್ತಿಗಳ ವಿರುದ್ಧ ವಿನಾಕಾರಣ ದೂರುಗಳನ್ನು ಬರೆಯುತ್ತಿದ್ದ ಅಂದರೆ ನನಗೆ ಗೊತ್ತಿಲ್ಲ.

ನಾನು ದೂರನ್ನು ಮಂಜುನಾಥ, ಹರೀಶ, ವಿರೇಶ ಮತ್ತು ಮಂಜುಳಾ ರವರ ವಿರುದ್ಧ ನೀಡಿರುತ್ತೇನೆ. ಸಹಕಾರ ಸಂಘಗಳ ಸಹಾಯಕ ನಿಭಂಧಕರು, ಹೊಸಪೇಟೆ ರವರ ಕಚೇರಿಯಲ್ಲಿ ಈ ಪ್ರಕರಣದ ವಿಷಯಕ್ಕೆ ಸಂಬಂಧಿಸಿ ಪ್ರಕರಣ ನಡೆದಿತ್ತು ಅಂದರೆ ಸರಿ. ಸದರಿ ಪ್ರಕರಣದಲ್ಲಿ ಈ ಪ್ರಕರಣದ 1 ನೇ ಆರೋಪಿ ಮಂಜುನಾಥ ಅರ್ಜಿದಾರರು ಅಂದರೆ ಸರಿ. ಸದರಿ ಕಚೇರಿಯಲ್ಲಿ ನಾನು ಯಾವುದೇ ಪ್ರಕರಣ ದಾಖಲಿಸಿಲ್ಲ ಮತ್ತು ಸಾಕ್ಷ್ಯ ನುಡಿಯಲು ಹೋಗಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕರೆದಿಲ್ಲ, ನಾನು ಹೋಗಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಪರವಾಗಿ ಸದರಿ ಕಚೇರಿಯಲ್ಲಿ ಆದೇಶ ಆಗಿರುತ್ತದೆ ಅಂದರೆ ಸರಿ. ಈ ಪ್ರಕರಣ ದಾಖಲಾದಾಗ ಮಂಜುನಾಥ ರವರಿಗೂ ಮತ್ತು ಮೇಲೆ ಹೇಳಿದ ಭೀಮಸೇನ ರವರಿಗೆ ವೈಮನಸ್ಸು ಇತ್ತು ಅಂದರೆ ಸರಿಯಲ್ಲ. ನನಗೂ ಮತ್ತು ಮಂಜುನಾಥ ರವರಿಗೆ ಸಂಬಂಧ ಸರಿ ಇರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಆತ ದುಡ್ಡು ಕೊಡಬೇಕಾಗಿದ್ದರಿಂದ ಸಂಬಂಧ ಕೆಟ್ಟಿತ್ತು ಎಂದು ನುಡಿಯುತ್ತಾರೆ.

1 ನೇ ಆರೋಪಿ ಮಂಜುನಾಥ ಪರ ಭೀಮಸೇನ ರಾವ್ ರವರ ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಹೊಸಪೇಟೆಯಲ್ಲಿ ವಾದ ಮಂಡಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಾನು, ಭೀಮಸೇನ ರಾವ್ ಮತ್ತು ಮಂಜುನಾಥರವರು ಒಳ್ಳೆಯ ಸಂಬಂಧ ಹೊಂದಿ, ಮಂಜುನಾಥ ಪರ ಭೀಮಸೇನ ರಾವ್ ರವರು ವಾದ ಮಂಡಿಸಿರುವುದು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಪಿಗಮಿಯನ್ನು ಪ್ರತಿದಿನ ಕಟ್ಟುತ್ತಿದ್ದೆ. ನಾನು ವರ್ಷಕ್ಕೊಮ್ಮೆ ಸದರಿ ಹಣವನ್ನು ಡ್ರಾ ಮಾಡುತ್ತಿದ್ದೆ. ಆ ರೀತಿ ಡ್ರಾ ಮಾಡಲು ಓಚರ್ ನೀಡಿದರೆ ಉಳಿತಾಯ ಖಾತೆಗೆ ಜಮಾ ಮಾಡುತ್ತಿದ್ದರು. ಉಳಿತಾಯ ಖಾತೆಗೆ ಹಣ ಜಮಾ ಆದರೆ ಮೊಬೈಲ್ ಫೋನ್ ಗೆ ಸಂದೇಶ ಬರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಪ್ರಕರಣ ಆಗುವಾಗ ಆ ಸೌಲಭ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ಹಣ ಪಡೆಯಲು ನಾನು ಓಚರ್ ಕೊಡುತ್ತಿದ್ದೆ. ನಾನು **2015** ರಿಂದ **2019-20** ರವರೆಗೆ ಬಿ ಡಿ ಸಿ ಸಿ ಬ್ಯಾಂಕ್ ನಲ್ಲಿ ಪಿಗಮಿ ಹಣ ಕಟ್ಟಿರುತ್ತೇನೆ. **2019-20** ರ ನಂತರದಲ್ಲಿ ಪಿಗಮಿ ಹಣ ಕಟ್ಟಿರುವುದಿಲ್ಲ. ನಾನು ಕಟ್ಟಿದ್ದ ಹಣವನ್ನು ನಾನು ಬ್ಯಾಂಕ್ ನಿಂದ ಬಿಡಿಸಿಕೊಂಡು, ಭೀಮಸೇನ ರಾವ್ ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಪೋಲಿಸರು ಭೀಮಸೇನ ರಾವ್ ರವರ ಫೋಟೋಗಳನ್ನು ತೆಗೆದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಪ್ರತಿ ವರ್ಷ ಬ್ಯಾಂಕ್ ನ ಆಡಿಟ್ ಆದಾಗ ವ್ಯತ್ಯಾಸಗಳು ಆಗಿದ್ದಲ್ಲಿ ಕಂಡು ಬರುತ್ತದೆ ಅಂದರೆ ಸರಿ. ನಾನು ಬ್ಯಾಂಕ್ ನ ಆಡಿಟ್ ವರದಿಯನ್ನು ನೋಡಿರುವುದಿಲ್ಲ.

ನನ್ನ ಹಣ ದುರುಪಯೋಗ ಆಗದ ಕಾರಣವೇ ಆ ಬಗ್ಗೆ ಆಡಿಟ್ ವರದಿಗಳಲ್ಲಿ ನಮೂದುಗೊಂಡಿಲ್ಲ ಅಂದರೆ ಸರಿಯಲ್ಲ. ನನ್ನ ಸಹಿಗಳನ್ನು ಯಾರು ನಕಲು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ನಾನೇ ಮಾಡಿದ್ದು, ಈಗ ಇಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಭೀಮಸೇನ ರವರು ಬಿ ಡಿ ಸಿ ಸಿ ಬ್ಯಾಂಕ್ ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರೆ ಅಧಿಕಾರಿಗಳ ವಿರುದ್ದ ದೂರುಗಳನ್ನು ನೀಡಿರುವುದು ನನಗೆ ಗೊತ್ತು ಅಂದರೆ ಸರಿಯಲ್ಲ.

ನಾನು ನೀಡಿದ್ದ ಓಚರ್ ಗಳಲ್ಲಿ ಸಹಿಗಳು ವ್ಯತ್ಯಾಸ ಆಗಿದ್ದಲ್ಲಿ ಮತ್ತು ಲೆಕ್ಕ ಪತ್ರಗಳಲ್ಲಿ ವ್ಯತ್ಯಾಸಗಳು ಕಂಡು ಬಂದಲ್ಲಿ ಪೋಲಿಸರು ನಾನು ದೂರು ನೀಡಿದ ತಕ್ಷಣವೇ ಪ್ರಥಮ ವರ್ತಮಾನ ವರದಿಯನ್ನು ತಯಾರಿಸುತ್ತಿದ್ದರು, ಆ ರೀತಿ ಯಾವುದೇ ವ್ಯತ್ಯಾಸ ಆಗದಿದ್ದ ಕಾರಣ ಪ್ರಕರಣ ದಾಖಲಿಸಿರಲಿಲ್ಲ ಅಂದರೆ ಸರಿಯಲ್ಲ. ನನ್ನ ದೂರು ಸತ್ಯಾಂಶದಿಂದ ಕೂಡಿರದಿದ್ದ ಕಾರಣ ಪೋಲಿಸರು ಯಾವುದೇ ಪ್ರಕರಣವನ್ನು ದಾಖಲಿಸಿರಲಿಲ್ಲ ಅಂದರೆ ಸರಿಯಲ್ಲ. ಬ್ಯಾಂಕ್ ನ ಯಾವುದೇ ಅಧಿಕಾರಿ ನನ್ನ ನಕಲಿ ಸಹಿ ಮಾಡಿಲ್ಲ, ನನ್ನ ಹಣ ದುರುಪಯೋಗ ಮಾಡಿಲ್ಲ ಮತ್ತು ನನಗೆ ಮೋಸ ಮಾಡಿಲ್ಲ ಅಂದರೆ ಸರಿಯಲ್ಲ.

ಪಂಚನಾಮೆಯಲ್ಲಿನ ಸಹಿಗಳನ್ನು ಗಾಂಧಿ ಚೌಕಿನಲ್ಲಿ ಮಾಡಿರುತ್ತೇನೆ. ಪಂಚನಾಮೆಯನ್ನು ನಾನು ಹೋದಾಗ ಬರೆಯುತ್ತಿದ್ದರು. ಪಂಚನಾಮೆಯನ್ನು ಯಾವ ತಾರೀಖಿನಂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

ಭೀಮಸೇನ ರಾವ್ ರವರಿಗೂ ಮತ್ತು ಬ್ಯಾಂಕ್ ನ ಅಧಿಕಾರಿಗಳಿಗೂ ವ್ಯಾಜ ಬಂದಿದ್ದರಿಂದ, ಆತ ನನ್ನನ್ನು ಎತ್ತಿಕಟ್ಟಿ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ಪಂಚನಾಮೆ ಬರೆದಾಗ ಯಾರು ಹಾಜರು ಇದ್ದರು ಮತ್ತು ಯಾರು ಬರೆದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿಃ 3 ರ 4 ಫೋಟೋಗಳಲ್ಲಿ ಭೀಮಸೇನ ರಾವ್ ರವರು ಇರುತ್ತಾರೆ ಅಂದರೆ ಸರಿ. ಆತನೇ ಮುಖ್ಯ ವ್ಯಕ್ತಿಯಾಗಿ ಫೋಟೋ ತೆಗೆಸಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಸೃಷ್ಟಿ ಮಾಡಿದ ದಾಖಲೆಗಳ ಆಧಾರದ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3 ನೇ ಆರೋಪಿಗೂ ಪ್ರಕರಣಕ್ಕೂ ಸಂಬಂಧವಿಲ್ಲದಿದ್ದರೂ ವಿನಾಕಾರಣ ಆತನ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ದೂರು 1, 2,4 ನೇ ಆರೋಪಿತರ ವಿರುದ್ಧ ವಜಾ ಆಗಿದೆ ಅಂದರೆ ಸರಿ. ಭೀಮಸೇನ ರಾವ್ ರವರ ಮಾತು ಕೇಳಿ ಸುಳ್ಳು ದೂರು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನನಗೆ ಯಾರು ಯಾರು ಎದುರುರಾಗುತ್ತಾರೋ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸುವ ಹವ್ಯಾಸ ಬೆಳೆಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ.

ನಾನು ಇದೆ ನ್ಯಾಯಾಲಯದಲ್ಲಿ 2 ಪ್ರಕರಣಗಳಲ್ಲಿ ಆರೋಪಿಯಾಗಿದ್ದೆ. ಆ ರೀತಿ ಸೊಸೈಟಿಯ ಚೆಕ್ ಬೌನ್ಸ ಪ್ರಕರಣಗಳಲ್ಲಿ ಆರೋಪಿ ಇದ್ದೆ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.